ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಏನೂ ಅವರು ಹೇಳಿಲ್ಲ.

ಶ್ರೀ ಜಿ. ರಾಮೆಗೌಡ.—ಈ 3 ಜನ ಕಂಟ್ರಾಕ್ಟರುಗಳಲ್ಲಿ ಇಬ್ಬರು ಕಂಟ್ರಾಕ್ಟರುಗಳು ರೇಟು ಕಡಿಮೆ ಆಯಿತು, ಆದ್ದರಿಂದ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹೇಳಿದರಿ. ಹಾಗಾದರೆ ಈ ವಿಚಾರವಾಗಿ ತಾವು ಏನಾದರೂ ತೀರ್ಮಾನ ತೆಗೆದುಕೊಂಡಿದ್ದೀರಾ, ಅಥವಾ ಈ ಕೆಲಸಕ್ಕೆ ರೀ ಟೆಂಡರ್ ಕರೆಯುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪ್ರೊಸೀಜರ್ ಪ್ರಕಾರ, ರೂಲ್ಸ್ ಪ್ರಕಾರ ಅವರಿಗೆ ಕಂಟ್ರಾಕ್ಟ್ ಕೊಟ್ಟಿರುವಾಗ ಅವರು ರೂಲ್ಸ್ ಪ್ರಕಾರ ಕೆಲಸವನ್ನು ಮಾಡದಿದ್ದರೆ ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು, ಮತ್ತೊಂದು ಏಜೆನ್ಸಿಗೆ ಆ ಕೆಲಸವನ್ನು ಒಪ್ಪಿಸಿ ಮಾಡಬೇಕು. ಅದನ್ನು ಇಂಜಿನಿಯರು ಮಾಡುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಅಣೆಕಟ್ಟಿನ ಕೆಲಸಕ್ಕೆ ಸಂಬಂಧಪಟ್ಟಹಾಗೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುವ ಕತೆಯಲ್ಲ 47 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇದೇ ರೇಟಿನಲ್ಲಿ ನೀವು ಈ ಅಣೆಕಟ್ಟಿನ ಕೆಲಸಕ್ಕೆ ದುಡ್ಡನ್ನು ಖರ್ಚು ಮಾಡಿದರೆ ಈ ಅಣೆಕಟ್ಟನ್ನು ಪೂರೈಸಬೇಕಾದರೆ ಎಷ್ಟು ವರ್ಷಗಳು ಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ರೆಕ್ಕದ ಪ್ರಕಾರ ಇನ್ನು ಎರಡು ವರ್ಷಗಳಲ್ಲಿ ರಿಜರ್ ವಾಯರ್‌ನಲ್ಲಿ ನೀರು ನಿಲ್ಲುತ್ತದೆಂದು ನಂಬಿಕೊಂಡಿದ್ದೇನೆ.

ಶ್ರೀ ಎಂ. ಬಸವರಾಜು.—ಗೊತ್ತೂರಿನ ಜನರು ಏನಾದರೂ ಈ ಅಣೆಕಟ್ಟೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದರೆ ಈ ಕೆಲಸವನ್ನು ನಿಲ್ಲಿಸುತ್ತೀರಾ ಅಥವಾ ಮುಂದುವರೆಸುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಮಾಡುವ ಪ್ರಶ್ನೆಯೇ ಇಲ್ಲ. ಕೆಲಸ ಪ್ರಾರಂಭ ಮಾಡಿದ್ದೇವೆ. ಈಗ ಯಾರು ವಿರೋಧ ಮಾಡಿದರೂ ಕೂಡ ಕೆಲಸ ನಿಲ್ಲಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—(ಗು) ಪ್ರಶ್ನೆಗೆ ಉತ್ತರವಾಗಿ ತಜ್ಞರ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ ಎಂದು ಹೇಳಿದ್ದೀರಿ. ತಜ್ಞರ ಅಭಿಪ್ರಾಯ ಪಡೆಯದೆ ಕೆಲಸ ಪ್ರಾರಂಭಮಾಡಿದ್ದೀರಿ. ಅವರೇನಾದರೂ ಈ ಪ್ರದೇಶ ಸರಿಯಿಲ್ಲ ಎಂದು ಹೇಳಿದರೆ ಇರುವರೆಗೆ ಖರ್ಚು ಮಾಡಿರುವ ಹಣ ವ್ಯರ್ಥವಾಗುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಕಟ್ಟಬಾರದು ಎಂದು ಯಾವ ತಜ್ಞರೂ ಅಭಿಪ್ರಾಯ ಪಡುವಹಾಗಿಲ್ಲ. ಕಟ್ಟುವ ಸ್ಪೇಷ್‌ನಲ್ಲಿ ಏನಾದರೂ ಭೂಕಂಪವಾಗುವಂತಹ ಪರಿಸ್ಥಿತಿ ಬಂದರೆ ಆಗ ಯಾವ ರೀತಿ ಸರಿಪಡಿಸಬೇಕು ಎಂಬ ಬಗ್ಗೆ ಸಲಹೆ ಕೊಡುತ್ತಾರೆ. ಅದರಂತೆ ಡಿಸೈನನ್ನು ಪರಿವರ್ತನೆ ಮಾಡಿ ಕಟ್ಟಬೇಕಾಗುತ್ತದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಷೆಡ್ಯೂಲ್ ಪ್ರಕಾರ ಕೆಲಸ ನಡೆಯುತ್ತಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಈ ಕಾರಣದಿಂದ ಈ ಕೆಲಸ ಇನ್ನು ಎಷ್ಟು ಸಮಯ ಹಿಂದೆ ಬೀಳಬಹುದು ಮತ್ತು ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ನಷ್ಟವಾಗಬಹುದು ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ. ಡ್ಯಾಮ್ ಕೆಲಸ ಬಂದ್ ಆಗಿದೆ. ಆ ಕೆಲಸವನ್ನು ಬೇರೆ ಏಜೆನ್ಸಿಗೆ ಕೊಟ್ಟು ಕೆಲಸ ಮಾಡಿಸಬೇಕೆಂಬ ವಿಚಾರ ಇದೆ. ಇತರೇ ಕೆಲಸಗಳು ನಡೆಯುತ್ತಿವೆ.

Products of Mandya Distilleries

100. Sri C. K. RAJAIAH SHETTY (Chicknayakanahalli).—Will the Minister of Finance, Planning and Youth Welfare be pleased to state.—

(*a*) different products produced in Mandya Distilleries and quantity of product in each item since last 3 years from 1965-66, 1966-67 and 1967-68 ;

(*b*) The names of firms and persons holding quotas of these products and the rates at which they are sold and the quantities allotted to them.

(SRI C. K. RAJAIAH SHETTY)

(*c*) The rate charged to Government for Arrack and the selling rate at Arrack to contractors and the rate at which the contractors are permitted to sell ?

SRI RAMAKRISHNA HEGDE (Minister for Finance, Planning and Youth Welfare).—

(*a*) A statement is appended.

(*b*) A statement showing the names of firms and persons holding quotas and the quantities allotted to them is placed on the table of the House. Rates are fixed only in respect of 30° under proof arrack and the rates are Rs. 3-17 per bulk litre and Rs. 3-64 per bottle of 750 ml. exclusive of duty, cesses, sales tax, octri.

(*c*) Rates charged to Government is 23 paise and 24 paise per bulk litre of arrack of 35° under proof and 30° under proof respectively. Selling rate by Government to contractors is Rs. 3-17 per bulk litre and Rs. 3-64 per bottle of 750 ml. of arrack of 30 under proof exclusive of duty, cesses, sales and octroi. The selling rate by contractors is not fixed.

STATEMENT

Showing the different products produced and the quantity of each product for the last 3 (Three) years in Mandya Distillery.

Item of production		Production in litres		
		1965—66	1966—67	1967—68
Absolute Alcohol	...	165581	131029	216449
Power Alcohol	...	150000	110200	192400
Rectified spirit	...	3937657	3033435	2846961
Arrack	...	1482605	1650286	4511379
Denatured spirit	...	524046	531700	356632
Brandy	...	3095	35215	10599
Whisky	...	900	...	3330
Gin	...	404	...	3489
Rum	...	840	2733	222033

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ —(ಅ) ಪ್ರಶ್ನೆಗೆ ಉತ್ತರವಾಗಿ ಒಟ್ಟಾಗಿ ಕೊಂಡುಕೊಳ್ಳುವ ಸಂದರ್ಭದಲ್ಲಿ ಒಂದು ಲೀಟರಿಗೆ 3—17 ರೂಪಾಯಿಗಳು ಮತ್ತು 750 ಮಿಲಿಮೀಟರ್‌ನ ಶೀಶೆಯೊಂದಕ್ಕೆ 3—64 ರೂಪಾಯಿಗಳು ಎಂದು ಹೇಳಿದ್ದೀರಿ. ಅಂದರೆ ಒಬ್ಬರಿಗೆ ಎಷ್ಟು ಬೇಕಾದರೆ ಅಷ್ಟು ಸಪ್ಲೈ ಮಾಡುತ್ತೀರಾ ಹೇಗೆ ? ಕೆಲವು ವರ್ಷಗಳ ಹಿಂದೆ ಒಂದು ಕಂಪನಿಯವರು ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳನ್ನು ಪೋನ ಮಾಡಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಅದನ್ನು ತನಿಖೆ ಮಾಡಿದಿರಾ, ಒಂದೇ ವರ್ಷ ಅವರು ಜಾಸ್ತಿ ಹಣ ಕಟ್ಟಿದ್ದು ನಿಜವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೋಟಾವನ್ನು ಯಾರು ಯಾರಿಗೆ ಎಷ್ಟೆಷ್ಟು ಕೊಡಲಾಗಿದೆ ಎಂಬ ಬಗ್ಗೆ ಇಲ್ಲಿ ಪ್ರಶ್ನೆ ಇರುವುದು. ರೆಕ್ಟಿಫೈಡ್ ಸ್ಪಿರಿಟನ್ನು ಕೋಟಾ ಪ್ರಕಾರ ಕೊಡುವುದಿಲ್ಲ. ಮಂಡ್ಯದ ಬಟ್ಟೆ ಕಾರ್ಖಾನೆಯವರು ಎಷ್ಟು ಉತ್ಪನ್ನ ಮಾಡುತ್ತಾರೋ ಅದರ ಪ್ರಕಾರ ಸಪ್ಲೈ ಮಾಡುತ್ತೇವೆ. ಯಾವುದೋ ಕಂಪನಿಯವರು ಸರ್ಕಾರಕ್ಕೆ ಹಣ ಕೊಡದ ಬಗ್ಗೆ ಪತ್ರಿಕೆಗಳಲ್ಲಿ ಬಂದ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಕಾರ್ಖಾನೆಯಲ್ಲಿ ತಯಾರಾದ ಉತ್ಪನ್ನಗಳನ್ನು ಹೋದ ವರ್ಷ ಯಾರುಯಾರಿಗೆ ಯಾವಯಾವ ಪ್ರಮಾಣದಲ್ಲಿ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ರೇಟನ್ನು ಚಾರ್ಜು ಮಾಡಿರುವುದು ಒಂದು ಲೀಟರಿಗೆ 3—17 ರೂಪಾಯಿಗಳು, 750 ಮಿಲಿಮೀಟರಿನ ಶೀಶೆಯೊಂದಕ್ಕೆ 3—64 ರೂಪಾಯಿಗಳು. ಎಷ್ಟು ಜಾಸ್ತಿ ಬೆಲೆಗೆ ಮಾರುವ ಬದಲು ಇನ್ನೂ ಕಡಿಮೆ. ಬೆಲೆಗೆ ಮಾರಾಟ ಮಾಡಿದರೆ ತಮಗೆ ಇನ್ನೂ ಹೆಚ್ಚಿನ ಲಾಭ ಬರುವುದಿಲ್ಲವೇ ?

(ಉತ್ತರವಿಲ್ಲ).

Extension of S. D. North Canal in K. R. Pet Taluk

246. Sri M. K. BOMME GOWDA (K. R. Pet).—

Will the the Minister of State for Minor Irrigation be pleased to state :—

(*a*) when the work of extension of S. D. North Canal in Krishnarajpet Taluk was started;

(*b*) the reasons for not yet completing the same;

(*c*) the amount spent on this behalf ?

Smt. BASAVARAJESWARI (Deputy Minister for Social Wefare) [on behalf of SRI A. J. DODDAMETI (Minister of State for Minor Irrigation)].—

(*a*) In November, 1963.

(*b*) The work is now completed and water is being supplied.

(*c*) Rs. 49,336 to end of December 1968.

ಶ್ರೀ ಎಂ. ಕೆ. ಬೊಮ್ಮೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಕಾಮಗಾರಿಯು ಈಗ ಪೂರ್ತಿಯಾಗಿದ್ದು ನೀರನ್ನು ಒದಗಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ಅಲ್ಲಿ ನೀರನ್ನು ಒದಗಿಸುತ್ತಿಲ್ಲ. ಮತ್ತು ವ್ಯವಸಾಯವಾಗುತ್ತಿಲ್ಲ. ನಾಲಾ ಬಡಾವಣೆಯ ಒಂದು ಕಡೆ ದಡ ಕುಸಿದು ನೀರು ಬಂದ್ ಆಗಿದೆ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆ ?